**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 3**

**ದಿಃ 25.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ ಸಿ ಜೆ ವಕೀಲರಿಂದಃ-**

ವಾದಿಯು ದಾವಾ ಹಾಕಿರುವ ಬಗ್ಗೆ ಮತ್ತು ದಾಖಲಾತಿಗಳನ್ನು ಸಲ್ಲಿಸಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿರುವ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನಾನು ಓದಿರುವುದಿಲ್ಲ ಆದ್ದರಿಂದ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನಾನು ತಿಳಿದುಕೊಂಡಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಸಹಿಯನ್ನು ಹಾಕಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ತಾವು ನ್ಯಾಯಾಲಯಕ್ಕೆ ಸಲ್ಲಿಸಿರುವ ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಬರೆಸಿದ್ದೀರಿ ಎಂದರೆ ಸರಿ. ಈ ದಾವೆಯಲ್ಲಿ ಯಾವ ಕ್ರಯ ಪತ್ರವನ್ನು ವಜಾ ಮಾಡಬೇಕೆಂದು ವಾದಿಯು ಈ ದಾವೆಯಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ದಿಃ 23.04.1972 ರ ಕ್ರಯ ಪತ್ರವನ್ನು ತಾವು ಖುದ್ದಾಗಿ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಬಗ್ಗೆ ನನಗೆ ಮಾಹಿತಿಯನ್ನು ನನ್ನ ತಂದೆ ನನಗೆ ನೀಡಿರುತ್ತಾರೆ. ಸದರಿ ಕ್ರಯ ಪತ್ರದ ಬಗ್ಗೆ ನನ್ನ ತಂದೆಯವರು ಸುಮಾರು 15 ರಿಂದ 20 ವರ್ಷಗಳ ಹಿಂದೆ ತಿಳಿಸಿರುತ್ತಾರೆ. ಸದರಿ ಕ್ರಯ ಪತ್ರವು ಯಾರಿಂದ ಯಾಗಿದೆ ಎಂಬ ವಿಚಾರವು ತಿಳಿದುಕೊಂಡಿಲ್ಲ. ತಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ದಿಃ 23.04.1972 ರ ಕ್ರಯ ಪತ್ರವನ್ನು ಪ್ರಶ್ನೆ ಮಾಡಿದ್ದಾರ ಎಂದರೆ ಸಾಕ್ಷಿಯು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು 19 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಿಡಿ 87 ರಿಂದ 91 ರ ದಾಖಲಾತಿಗಳನ್ನು ಹೊರತು ಪಡಿಸಿ ತಮ್ಮ ತಂದೆಯವರು ದಿಃ 23.04.1972 ರ ಕ್ರಯ ಪತ್ರವನ್ನು ಪ್ರಶ್ನೆ ಮಾಡಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಸದರಿ ಕ್ರಯ ಪತ್ರಕ್ಕೆ ಸಂಬಂದಪಟ್ಟಂತೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ, ಆದರೆ ನಮ್ಮ ಚಿಕ್ಕಪ್ಪನವರು

ದಾವೆಯನ್ನು ಹೂಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಚಿಕ್ಕಪ್ಪನವರು ಸಲ್ಲಿಸಿರುವ ದಾವಾ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಮ್ಮ ಚಿಕ್ಕಪ್ಪನವರು ಸಲ್ಲಿಸಿರುವ ದಾವೆಗೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಮ್ಮ ತಂದೆಯವರ ಜೀವಿತಾವಧಿಯಲ್ಲಿ ದಿಃ 23.04.1972 ರ ಕ್ರಯ ಪತ್ರದ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ತಮ್ಮ ಪ್ರತಿವಾದ ಪತ್ರದಲ್ಲಿ ತಮ್ಮ ತಂದೆಯವರ ಜೀವಿತಾವಧಿಯಲ್ಲಿ ದಿಃ 23.04.1972 ರ ಕ್ರಯ ಪತ್ರವನ್ನು ಪ್ರಶ್ನೆ ಮಾಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ತಮ್ಮ ತಂದೆಯವರಿಗಾಗಲಿ ಅಥವಾ ತಮ್ಮ ಚಿಕ್ಕಪ್ಪನವರಿಗಾಗಲಿ ದಾವಾ ಸ್ವತ್ತು ಅವರ ಹೆಸರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟ ದಾಖಲಾತಿಗಳು ತಮ್ಮ ತಂದೆ ಅಥವಾ ತಮ್ಮ ಚಿಕ್ಕಪ್ಪನವರಿಗೆ ಯಾವಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ತಮ್ಮ ತಂದೆ ಹಾಗೂ ತಾವು ಇಲ್ಲಿಯ ತನಕ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ನನ್ನನ್ನು ಹೊರತು ಪಡಿಸಿ ನನ್ನ ಅಣ್ಣ ತಮ್ಮಂದಿರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 1972 ರಿಂದ ದಿಃ 23.04.1972 ರ ಕ್ರಯ ಪತ್ರದ ಬಗ್ಗೆ ತಮಗೆ ಮಾಹಿತಿ ಇದ್ದರೂ ಸಹ ಸದರಿ ಕ್ರಯ ಪತ್ರವನ್ನು ತಾವು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ದಿಃ 23.04.1972 ರ ಕ್ರಯ ಪತ್ರದಂತೆ ಮುತ್ತಯ್ಯನವರು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ಮುತ್ತಯ್ಯನವರಿಗೆ ಕ್ರಯ ಪತ್ರ ಬರೆದುಕೊಟ್ಟಿರುವ ಚಲುವಯ್ಯ ತಮ್ಮ ತಾತ ಎಂದರೆ ಸರಿ. ಸದರಿ ಕ್ರಯ ಪತ್ರದ ಅನ್ವಯ ಕಂದಾಯ ದಾಖಲಾತಿಗಳು ಮುತ್ತಯ್ಯನವರ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸರಿ. 1972 ನೇ ಸಾಲಿನಿಂದ ಈ ದಾವೆಯನ್ನು ಹೂಡುವ ತನಕ ತಾವು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಮುತ್ತಯ್ಯನವರ ವಾರಸುದಾರರರು ಈ ದಾವೆಯ ಪ್ರತಿವಾದಿಗಳಾದ 1, 4 ರಿಂದ 8 ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಮ್ಮ ತಾತ ಚಲುವಯ್ಯನವರಿಗೆ ವಿಭಾಗದ ಮೂಲಕ ಯಾವ ಯಾವ ಆಸ್ತಿಗಳು ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪನವರ ನಡುವೆ ಆದ ವಿಭಾಗದ ಮೂಲಕ ತಮ್ಮ ತಂದೆಯವರಿಗೆ ಯಾವ ಆಸ್ತಿಗಳು ಬಂದಿವೆ ಎಂದರೆ ಸಾಕ್ಷಿಯು ಸರ್ವೆ ನಂ. 36 ಎಂದು ನುಡಿಯುತ್ತಾರೆ.

ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 3

ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.